ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN (E): 2582-2284
Vol-1 Issue 1, July-August 2019, 41-49
©IIMRD, Mysuru
IIMRD JOURNALS
www.iimrd.com

# ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ: ವಿಶೇಷವಾಗಿ ಪರಿಶಿಷ್ಟ ಜಾತಿ ಕೃಷಿಕಾರ್ಮಿಕ ಮಹಿಳೆಗೆ ಸಂಬಂಧಿಸಿದಂತೆ ಒಂದು ವಿಶ್ಲೇಷಣೆ

ಡಾ.ಕೆ. ಶೈಲಜ[1]

**ಪೀಠಿಕೆ:**

ಜಗತ್ತಿನಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರಲ್ಲಿ ಮೂರನೇ ಒಂದರಷ್ಟು ದುಡಿಯುವ ಮಹಿಳೆಯರಿದ್ದಾರೆ. ಆದರೆ ಒಟ್ಟು ಆದಾಯದಲ್ಲಿ ಹತ್ತನೇ ಒಂದರಷ್ಟನ್ನು ಪಡೆಯುತ್ತಿದ್ದಾರೆ. ಹಾಗೂ ಒಟ್ಟು ಜಾಗತಿಕ ಮಟ್ಟದಲ್ಲಿ ಶೇಕಡ ಒಂದಕ್ಕಿಂತಲೂ ಕಡಿಮೆ ಆಸ್ತಿಯನ್ನು ಹೊಂದಿದ್ದಾರೆ. ಭಾರತದ ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಲವಾರು ಬದಲಾವಣೆಗಳಾಗಿದ್ದು, ಅವುಗಳಲ್ಲಿ ಪ್ರಮುಖವಾಗಿ ಆರ್ಥಿಕ ಕ್ಷೇತ್ರದಲ್ಲಿ ಮಹಿಳೆಯರ ಸಹಭಾಗಿತ್ವ ಹೆಚ್ಚಾಗುತ್ತಿರುವುದನ್ನು ಕಾಣಬಹುದಾಗಿದೆ.

ಪ್ರಸ್ತುತ ದಿನಗಳಲ್ಲಿ ಮಹಿಳೆಯರು ಉದ್ಯೋಗ ಕ್ಷೇತ್ರಕ್ಕೆ ಹಿಂದಿನಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪಾದಾರ್ಪಣೆ ಮಾಡುತ್ತಿದ್ದಾರೆ ಅದಾಗ್ಯೂ ಕೂಡ ಮಹಿಳೆಯರು ಪುರುಷರಿಗಿಂತ ಎಲ್ಲಾ ಕ್ಷೇತ್ರಗಳಲ್ಲಿ ತೀರಾ ಹಿಂದುಳಿದ್ದಿದ್ದಾರೆ. ಹಾಗೂ ಕಡಿಮೆ ಆದಾಯ ಬರುವ ಮತ್ತು ಕೃಷಿಕ್ಷೇತ್ರವನ್ನೊಳಗೊಂಡಂತೆ ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಮಹಿಳೆಯರು ದುಡಿಯುತ್ತಿದ್ದಾರೆ. ಭಾರತದ ಮಟ್ಟಿಗೆ ಹೇಳಬೇಕೆಂದರೆ ಇದಕ್ಕೆ ಹಲವಾರು ಸಾಮಾಜಿಕ, ಸಾಂಸ್ಕೃತಿ, ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿವೆ.

ಪ್ರಸ್ತುತ ಲೇಖನದಲ್ಲಿ ಮೈಸೂರು ಜಿಲ್ಲೆಯ ಪರಿಶಿಷ್ಟಜಾತಿ ಸಮುದಾಯದ ಮಹಿಳಾ ಕೃಷಿಕಾರ್ಮಿಕರ ಸ್ಥಿತಿಗತಿಗಳು ಹಾಗೂ ಆರ್ಥಿಕಾಭಿವೃದ್ಧಿಯಲ್ಲಿ ಅವರ ಪಾತ್ರವನ್ನು ಕುರಿತು ವಿಶ್ಲೇಷಿಸಲಾಗಿದೆ.

ಮೈಸೂರು ಜಿಲ್ಲೆಯು ರಾಜ್ಯದ ದಕ್ಷಿಣ ಭಾಗದಲ್ಲಿದ್ದು, ಜಿಲ್ಲೆಯ ಉತ್ತರಕ್ಕೆ ಮಂಡ್ಯ, ದಕ್ಷಿಣ ಮತ್ತು ಆಗ್ನೇಯಕ್ಕೆ ಚಾಮರಾಜನಗರ, ಪಶ್ಚಿಮಕ್ಕೆ ಕೊಡಗು, ವಾಯುವ್ಯಕ್ಕೆ ಹಾಸನ ಜಿಲ್ಲೆ, ಈಶಾನ್ಯಕ್ಕೆ ಬೆಂಗಳೂರು ಜಿಲ್ಲೆಯನ್ನು ಒಳಗೊಂಡಿದೆ. ಜಿಲ್ಲೆಯು $11^{0}30^{1}$ ಉತ್ತರ ಅಕ್ಷಾಂಶದಿಂದ $12^{0}50^{1}$ ಉತ್ತರ ಅಕ್ಷಾಂಶದವರೆಗೆ ಹಾಗೂ $75^{0}45^{1}$ ಪೂರ್ವದಿಂದ $75^{0}45^{1}$ ಪೂರ್ವ ರೇಖಾಂಶದ ನಡುವೆ 6,307 ಚ.ಕಿ.ಮೀ ವ್ಯಾಪ್ತಿಯಲ್ಲಿ ಹರಡಿದೆ. ಅಂದರೆ ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇಕಡ 3.57 ಭೂ ಪ್ರದೇಶವನ್ನು ಹೊಂದಿದೆ. ಜಿಲ್ಲೆಯು ಮೈಸೂರು, ಹೆಗ್ಗಡದೇವನ ಕೋಟೆ, ಹುಣಸೂರು, ಕೃಷ್ಣರಾಜ ನಗರ, ಪಿರಿಯಾಪಟ್ಟಣ, ನಂಜನಗೂಡು, ತಿರಮಕೂಡಲು ನರಸೀಪುರ ತಾಲ್ಲೂಕುಗಳನ್ನೊಳಗೊಂಡಂತೆ ಒಟ್ಟು 7 ತಾಲ್ಲೂಕುಗಳನ್ನು ಒಳಗೊಂಡಿದೆ.

[1] *ಸಂಶೋಧನಾ ಸಲಹೆಗಾರರು, ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ಮೈಸೂರು*

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

**ಕೋಷ್ಟಕ: 1 ಮೈಸೂರು ಜಿಲ್ಲೆಯ ಜನಸಂಖ್ಯೆ ವಿವರ:**

| ವಿವರ | ಗ್ರಾಮೀಣ | ನಗರ | ಒಟ್ಟು | ಪರಿಶಿಷ್ಟ ಜಾತಿ ಜನಸಂಖ್ಯೆ |
|---|---|---|---|---|
| ಗಂಡು | 8,87,500 (50.54%) | 6,24,100 (50.11%) | 15,11,600 (50.36%) | 2,69,331 (50.20%) |
| ಹೆಣ್ಣು | 8,68,214 (49.45%) | 6,21,313 (49.9%) | 14,89,527 (49.64%) | 2,67,312 (49.80%) |
| ಒಟ್ಟು | 17,55,714 (100.00%) | 12,45,413 (100.00%) | 30,01,127 (100.00%) | 5,36,643 (100.00%) |

ಮೂಲ: ಭಾರತ ಜನಗಣತಿ–2011

2011ನೇ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ 15,11,600 ಪುರುಷ ಮತ್ತು 14,89,527 ಮಹಿಳೆಯರನ್ನೊಳಗೊಂಡಂತೆ ಒಟ್ಟು 30,01,127 ಜನಸಂಖ್ಯೆಯನ್ನು ಹೊಂದಿದೆ. ಅಂದರೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.4.91 ರಷ್ಟನ್ನು ಹೊಂದಿರುವುದರ ಮುಖೇನ ರಾಜ್ಯದಲ್ಲಿ 3ನೇ ಸ್ಥಾನವನ್ನು ಹೊಂದಿದೆ. ಹಾಗೆಯೇ ಜಿಲ್ಲೆಯು ರಾಜ್ಯದಲ್ಲಿ ಗ್ರಾಮೀಣ ಜನಸಂಖ್ಯೆಯಲ್ಲಿ 3ನೇ ಸ್ಥಾನವನ್ನು ಹಾಗೂ ನಗರ ಜನಸಂಖ್ಯೆಯಲ್ಲಿ 2ನೇ ಸ್ಥಾನವನ್ನು ಹೊಂದಿದೆ.

ಪ್ರದೇಶವಾರು ಜನಸಂಖ್ಯೆಯನ್ನು ಗಮನಿಸಿದಾಗ 8,87,500 ಪುರುಷ ಮತ್ತು 8,68,214 ಮಹಿಳೆಯರನ್ನೊಳಗೊಂಡಂತೆ ಒಟ್ಟು 17,55,714 ಜನರು ಗ್ರಾಮೀಣ ಪ್ರದೇಶದಲ್ಲಿಯೂ ಹಾಗೂ 6,24,100 ಪುರುಷರು ಮತ್ತು 6,21,313 ಮಹಿಳೆಯರನ್ನೊಳಗೊಂಡಂತೆ ಒಟ್ಟು 12,45,413 ಜನರು ನಗರ ಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಈ ದಶಕದಲ್ಲಿ ಗ್ರಾಮೀಣ ಜನಸಂಖ್ಯೆ ಪ್ರಮಾಣವು ಇಳಿಮುಖವಾಗಿದ್ದು, ನಗರ ಜನಸಂಖ್ಯೆ ಪ್ರಮಾಣವು ಏರಿಕೆಯಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ.

ಲಿಂಗವಾರು ನೋಡಿದಾಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಶೇ. 49.45 ಹಾಗೂ ನಗರ ಪ್ರದೇಶದಲ್ಲಿ ಶೇ.49.88 ಮಹಿಳಾ ಜನಸಂಖ್ಯೆಯನ್ನೊಳಗೊಂಡಂತೆ ಒಟ್ಟು ಶೇ.49.63 ರಷ್ಟು ಮಹಿಳಾ ಜನಸಂಖ್ಯೆಯನ್ನು ಹೊಂದಿದೆ ಅಂದರೆ ಜಿಲ್ಲೆಯಲ್ಲಿ ಹೆಚ್ಚು ಕಡಿಮೆ ಪುರುಷರಿಗೆ ಸಮನಾಗಿ ಮಹಿಳಯೆರ ಪ್ರಮಾಣವನ್ನು ಹೊಂದಿದೆ. ಜಿಲ್ಲೆಯ ಮಹಿಳೆಯರ ಪ್ರಮಾಣವನ್ನು ರಾಜ್ಯದ ಮಹಿಳೆಯರಿಗೆ ಹೋಲಿಸಿದಾಗ ಶೇ.4.94 ರಷ್ಟಿರುವುದನ್ನು ಮನಗಾಣಬಹುದಾಗಿದೆ.

ಮೈಸೂರು ಜಿಲ್ಲೆಯಲ್ಲಿ ಒಟ್ಟು ಪರಿಶಿಷ್ಟ ಜಾತಿ ಜನಸಂಖ್ಯೆಯಲ್ಲಿ ಶೇ.17 ರಷ್ಟು ಜನರು ಮಾತ್ರ ಕೃಷಿಭೂಮಿಯನ್ನು ಹೊಂದ್ದಿದ್ದಾರೆ. ಟಿ.ನರಸೀಪುರ ತಾಲ್ಲೂಕಿನಲ್ಲಿ ಅತಿ ಹೆಚ್ಚು ಮಂದಿ ಕೃಷಿ

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ಭೂಹಿಡುವಳಿಯನ್ನು ಹೊಂದಿದ್ದಾರೆ. ಆದರೆ ಕೆ.ಆರ್.ನಗರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಭೂಹಿಡುವಳಿದಾರರ ಪ್ರಮಾಣ ಕಡಿಮೆ ಇದೆ. ಹುಣಸೂರಿನಲ್ಲಿ ಕೇವಲ ಶೇ.16.4 ರಷ್ಟು ಪರಿಶಿಷ್ಟ ಜಾತಿ ಜನರು ಭೂಹಿಡುವಳಿಯನ್ನು ಹೊಂದಿದ್ದಾರೆ.

ಲಿಂಗಾನುಪಾತವನ್ನು ಗಮನಿಸಿದಾಗ ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ ಮಹಿಳೆಯರ ಪ್ರಮಾಣ 985 ರಷ್ಟಿದೆ. ರಾಜ್ಯದ ಸರಾಸರಿಗೆ (973) ಹೋಲಿಸಿದಾಗ ಜಿಲ್ಲೆಯಲ್ಲಿ ತುಸು ಅಧಿಕವಾಗಿರುವುದನ್ನು ಕಾಣಬಹುದಾಗಿದೆ. ಪರಿಶಿಷ್ಟ ಜಾತಿ ಲಿಂಗಾನುಪಾತವನ್ನು ನೋಡುವುದಾದರೆ 2001ರಲ್ಲಿ 965 ರಷ್ಟಿತ್ತು, 2011ರ ವೇಳೆಗೆ ಇದು 995ಕ್ಕೆ ವೃದ್ಧಿಸಿದೆ.

**ಕೋಷ್ಟಕ: 2 ಜಿಲ್ಲೆಯ ಸಾಕ್ಷರತ ಪ್ರಮಾಣ**

| ವಿವರ | ಸಾಮಾನ್ಯ ಸಾಕ್ಷರತೆ | ಪರಿಶಿಷ್ಟ ಜಾತಿ ಸಾಕ್ಷರತೆ |
|---|---|---|
| ಗಂಡು | 78.46 | 72.84 |
| ಹೆಣ್ಣು | 67.06 | 60.32 |
| ಒಟ್ಟು | 72.79 | 66.59 |

ಜಿಲ್ಲೆಯ ಸಾಕ್ಷರತೆಯನ್ನು ಗಮನಿಸಿದಾಗ 2011 ನೇ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ಸಾಕ್ಷರತೆ ಶೇ. 72.79 ರಷ್ಟಿದೆ. ಇದು ರಾಜ್ಯದ ಸರಾಸರಿ (ಶೇ.75.36)ಕ್ಕಿಂತಲೂ ಕಡಿಮೆಯಿದೆ. ಸಾಕ್ಷರತೆಯಲ್ಲಿ ಜಿಲ್ಲೆಯು ರಾಜ್ಯದಲ್ಲಿ 18 ಸ್ಥಾನವನ್ನು ಹೊಂದಿದೆ. ಪ್ರದೇಶವಾರು ನೋಡಿದಾಗ ಗ್ರಾಮೀಣ ಜನರ ಸಾಕ್ಷರತ ಪ್ರಮಾಣವು (ಶೇ.63.29) ನಗರ ಪ್ರದೇಶದ ಜನರ ಸಾಕ್ಷರತ ಪ್ರಮಾಣಕ್ಕೆ (ಶೇ.86.9) ಹೋಲಿಸಿದಾಗ ಶೇ.20 ರಷ್ಟು ಕಡಿಮೆಯಿದೆ. ಸಾಮಾನ್ಯ ಸರಾಸರಿ ಸಾಕ್ಷರತೆಗಿಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಪ್ರಮಾಣ ಕಡಿಮೆಯಿರುವುದನ್ನು ಕಾಣಬಹುದಾಗಿದೆ. ಈ ಸಮುದಾಯಗಳಲ್ಲೂ ಕೂಡ ಪುರುಷ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳಾ ಸಾಕ್ಷರತೆ ಪ್ರಮಾಣ ಕಡಿಮೆಯಿರುವುದನ್ನು ಕಾಣಬಹುದಾಗಿದೆ.

**ಕೋಷ್ಟಕ: 3 ಮೈಸೂರು ಜಿಲ್ಲೆಯಲ್ಲಿ ಲಿಂಗಕ್ಕನುಗುಣವಾಗಿ ದುಡಿಮೆಗಾರರ ವೃತ್ತಿ ಸಂರಚನೆ (ಶೇಕಡವಾರುಗಳಲ್ಲಿ)**

| ವಿವರ | ವ್ಯವಸಾಯ/ ಸಾಗುವಳಿದಾರರು | ಕೃಷಿ ಕೂಲಿಕಾರರು | ಗೃಹಾಧಾರಿತ ಕೈಗಾರಿಕೆಗಳಲ್ಲಿನ ದುಡಿಮೆಗಾರರು | ಇತರೆ ದುಡಿಮೆಗಾರರು | ಒಟ್ಟು ದುಡಿಮೆಗಾರರು | ದುಡಿಮೆಯಲ್ಲಿ ತೊಡಗಿಲ್ಲದವರು |
|---|---|---|---|---|---|---|
| ಗಂಡು | 28.43 | 18.06 | 1.83 | 51.66 | 60.98 | 39.02 |
| ಹೆಣ್ಣು | 22.16 | 36.86 | 2.88 | 38.10 | 26.35 | 73.65 |
| ಒಟ್ಟು | 26.58 | 23.66 | 2.15 | 47.61 | 43.79 | 56.21 |

ಮೂಲ: ಭಾರತ ಜನಗಣತಿ–2011

ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇ. 60.98 ಪುರುಷ ಮತ್ತು ಶೇ. 26.35 ರಷ್ಟು ಮಹಿಳೆಯರನ್ನೊಳಗೊಂಡಂತೆ ಒಟ್ಟು ಶೇ.43.79 ರಷ್ಟು ದುಡಿಮೆಗಾರರಿದ್ದು, ಇವರಲ್ಲಿ ಶೇ.60.23ರಷ್ಟು

ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD

IIMRD JOURNALS

ಪುರುಷ ಮತ್ತು ಶೇ.32.22ರಷ್ಟು ಮಹಿಳೆಯರನ್ನೊಳಗೊಂಡಂತೆ ಒಟ್ಟು ಶೇ.47.89 ರಷ್ಟು ಗ್ರಾಮೀಣ ಪ್ರದೇಶಗಳಲ್ಲೂ, ಶೇ.57.78 ಪುರುಷ ಮತ್ತು 18.13 ರಷ್ಟು ಮಹಳೆಯರನ್ನೊಳಗೊಂಡಂತೆ ಶೇ. 38.00 ರಷ್ಟು ನಗರ ಪ್ರದೇಶಗಳಲ್ಲೂ ದುಡಿಮೆ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಹೋಲಿಸಿದಾಗೆ ದುಡಿಮೆಯಲ್ಲಿ ಪಾಲ್ಗೊಳ್ಳುವಿಕೆ ಪ್ರಮಾಣ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದ್ದು, ಇದು ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣ ದುಡಿಮೆಗಾರರ ಪಾತ್ರ ಮಹತ್ವ ಎಂಬುದನ್ನು ಸೂಚಿಸುತ್ತದೆ. ಇನ್ನುಳಿದಂತೆ ಲಿಂಗವಾರು ನೋಡಿದಾಗಲೂ ಕೂಡ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಮಹಿಳೆಯರಿಗಿಂತ ಪುರುಷ ದುಡಿಮೆಗಾರರ ಪ್ರಮಾಣ ಅಧಿಕವಾಗಿದೆ. ಮಹಿಳೆ ದುಡಿಮೆಗಾರರ ಪ್ರಮಾಣ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅಧಿಕವಾಗಿದ್ದು, ಬಹುತೇಕ ಮಹಿಳೆಯರು ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅಂದರೆ ಜಿಲ್ಲೆಯ ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಕೃಷಿಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ.

ಒಟ್ಟು ದುಡಿಮೆಗಾರರಲ್ಲಿ ಪೂರ್ಣಾವಧಿ ಮತ್ತು ಅಲ್ಪಾವಧಿ ದುಡಿಮೆಗಾರರು ಎಂದು ವರ್ಗೀಕರಿಸಬಹುದಾಗಿದೆ. ಅಂದರೆ ವರ್ಷದಲ್ಲಿ 183 ಅಥವಾ ಅದಕ್ಕಿಂತ ಹೆಚ್ಚು ದಿನ ಕೆಲಸ ಮಾಡುವವರನ್ನು ಪೂರ್ಣಾವಧಿ ದುಡಿಮೆಗಾರರು ಎಂದು ಕರೆಯಲಾಗುತ್ತದೆ. (ಉಲ್ಲೇಖ: ಮಾನವ ಅಭಿವೃದ್ಧಿ ವರದಿ, 2014) ಇಂತಹ ಪೂರ್ಣಾವಧಿ ದುಡಿಮೆಗಾರರ ಪ್ರಮಾಣ ಜಿಲ್ಲೆಯಲ್ಲಿ ಶೇ.82.33 ರಷ್ಟಿದ್ದು, ಅಲ್ಪಾವಧಿ ದುಡಿಮೆಗಾರರ ಪ್ರಮಾಣ ಶೇ.17.67 ರಷ್ಟಿದೆ. ಲಿಂಗವಾರು ನೋಡಿದಾಗ ಪುರುಷ ಮತ್ತು ಮಹಿಳೆ ಎರಡೂ ವರ್ಗದಲ್ಲಿಯೂ ಕೂಡ ಪೂರ್ಣಾವಧಿ ದುಡಿಮೆಗಾರರ ಪ್ರಮಾಣವೇ ಅಧಿಕವಾಗಿದೆ.

ಜಿಲ್ಲೆಯ ಒಟ್ಟು ದುಡಿಮೆಗಾರರಲ್ಲಿ ಪುರುಷರ ಪ್ರಮಾಣ ಶೇ.60.98 ರಷ್ಟಿದ್ದರೆ, ಒಟ್ಟು ಮಹಿಳೆಯರ ಪ್ರಮಾಣ ಪ್ರಮಾಣ ಶೇ.26.34 ರಷ್ಟಿದೆ. ಲಿಂಗವಾರು ಉದ್ಯೋಗ ಸಂರಚನೆಯನ್ನು ನೋಡಿದಾಗ ಒಟ್ಟು ದುಡಿಮೆಗಾರರಲ್ಲಿ ಶೇ28.46 ರಷ್ಟು ಪುರುಷರು ವ್ಯವಸಾಯಗಾರರಾಗಿಯೂ, ಶೇ. 18.06 ಕೃಷಿಕಾರ್ಮಿಕರಾಗಿಯೂ, ಶೇ.1.83ರಷ್ಟು ಗೃಹ ಕೈಗಾರಿಕೆಗಳಲ್ಲಿಯೂ, ಶೇ. 51.65 ಇತರೆ ಕ್ಷೇತ್ರಗಳಲ್ಲಿಯೂ ದುಡಿಯುತ್ತಿದ್ದಾರೆ. ಹಾಗೂ ಶೇ.22.16 ಮಹಿಳೆಯರು ವ್ಯವಸಾಯಗಾರರಾಗಿಯೂ, ಶೇ.36.86 ರಷ್ಟು ಕೃಷಿಕಾರ್ಮಿಕರಾಗಿಯೂ, ಶೇ.2.88 ಗೃಹಾಧಾರಿತ ಕೈಗಾರಿಕೆಗಳಲ್ಲಿಯೂ ಮತ್ತು ಶೇ.38.10 ರಷ್ಟು ಮಹಿಳೆಯರು ಇತರ ಕ್ಷೇತ್ರದಲ್ಲಿಯೂ ದುಡಿಯುತ್ತಿದ್ದಾರೆ. ವ್ಯವಸಾಯ ಮತ್ತು ಇತರೆ ಕ್ಷೇತ್ರದಲ್ಲಿ ಮಹಿಳೆಯರ ಪ್ರಮಾಣ ಪುರುಷರ ಪ್ರಮಾಣಕ್ಕಿಂತ ಕಡಿಮೆಯಿದ್ದರೆ, ಕೃಷಿಕಾರ್ಮಿಕ ಮತ್ತು ಗೃಹಾಧಾರಿತ ಕೈಗಾರಿಕೆಗಳಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣ ಅಧಿಕವಾಗಿದೆ ಈ ಅಂಶವೂ ಕೂಡ ಆರ್ಥಿಕಾಭಿವೃದ್ಧಿಯಲ್ಲಿ ಮಹಿಳಾ ಕೃಷಿಕಾರ್ಮಿಕರ ಸಹಭಾಗಿತ್ವದ ಮಹತ್ವವನ್ನು ತಿಳಿದುಕೊಳ್ಳಬಹುದಾಗಿದೆ. ಇದರಲ್ಲಿ ಹಿಂದುಳಿಗ ಮತ್ತು ಪರಿಶಿಷ್ಟ ಜಾತಿ ಮಹಿಳೆಯರ ಕೊಡುಗೆ ಅಪಾರವಾದುದಾಗಿದೆ.

**ಕೋಷ್ಟಕ: 4 ಪರಿಶಿಷ್ಟ ಜಾತಿ ಒಟ್ಟು ಜನಸಂಖ್ಯೆಯಲ್ಲಿ ದುಡಿಮೆಗಾರರ ಪ್ರಮಾಣ–2011**

| ವಿವರ | ಒಟ್ಟು ಪರಿಶಿಷ್ಟ ಜಾತಿ ಜನಸಂಖ್ಯೆ | ಒಟ್ಟು ಪರಿಶಿಷ್ಟ ಜಾತಿ ದುಡಿಮೆಗಾರರು | | | ಪೂರ್ಣಾವಧಿ ದುಡಿಮೆಗಾರರು | ಅಲ್ಪಾವಧಿ ದುಡಿಮೆಗಾರರು |
|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | | |
| ಗ್ರಾಮೀಣ | 3,80,388 (70.88) | 1,18,629 (62.03) | 67,422 (35.64) | 1,86,051 (48.91) | 1,41,495 (75.05) | 44,556 (24.95) |
| ನಗರ | 1,56,255 (29.12) | 43,939 (56.26) | 15576 (19.92) | 59,515 (38.08) | 50,674 (85.14) | 8,841 (14.86) |
| ಒಟ್ಟು | 5,36,643 (100.00) | 1,62,568 (30.29) | 82,998 (33.80) | 2,45,566 (45.75) | 1,92,169 (78.25) | 53,397 (21.75) |

ಮೂಲ:ಭಾರತ ಜನಗಣತಿ–2011

ಗಮನಿಸಿ: ಕಂಸದಲ್ಲಿರುವುದು ಶೇಕಡವಾರು ಅಂಕಿ ಅಂಶಗಳು

ಕೋಷ್ಟಕ 4 ರಲ್ಲಿ ಪರಿಶಿಷ್ಟ ಜಾತಿ ಒಟ್ಟು ಜನರಲ್ಲಿ ದುಡಿಮೆಗಾರರ ಪ್ರಮಾಣವನ್ನು ತೋರಿಸುತ್ತದೆ. ಮೈಸೂರು ಜಿಲ್ಲೆಯಲ್ಲಿ ಒಟ್ಟು ಪರಿಶಿಷ್ಟ ಜಾತಿ ಜನರಲ್ಲಿ ಶೇ.30.29 ಪುರುಷ ಮತ್ತು ಶೇ.33.80 ರಷ್ಟು ಮಹಿಳೆಯರನ್ನೊಳಗೊಂಡಂತೆ ಒಟ್ಟು ಶೇ.45.75 ಜನರು ಮಾತ್ರ ದುಡಿಮೆಗಾರರಾಗಿದ್ದಾರೆ. ದುಡಿಮೆ ಪಾಲ್ಗೋಳ್ಳುವಿಕೆ ದರ ಪುರುಷರಿಂತ ಮಹಿಳೆಯರ ಪ್ರಮಾಣ ಅಧಿಕವಾಗಿದೆ. ಜಿಲ್ಲೆಯ ಸರಾಸರಿ ಮಹಿಳಾ ದುಡಿಮೆಗಾರರ ಪ್ರಮಾಣಕ್ಕಿಂತ ಪರಿಶಿಷ್ಟ ಜಾತಿ ಮಹಿಳೆಯರ ದುಡಿಮೆಗಾರರ ಪ್ರಮಾಣ ಅಧಿಕವಾಗಿದೆ.

ಪ್ರದೇಶವಾರು ಮತ್ತು ಲಿಂಗವಾರು ಪರಿಶಿಷ್ಟಜಾತಿ ದುಡಿಮೆಗಾರರ ಪ್ರಮಾಣವನ್ನು ನೋಡಿದಾಗ ಗ್ರಾಮೀಣ ಪ್ರದೇಶದಲ್ಲಿ ಶೇ.62.03 ರಷ್ಟು ಪುರುಷರು ಮತ್ತು ಶೇ.35.64ರಷ್ಟು ಮಹಿಳೆಯರನ್ನೊಳಗೊಂಡಂತೆ ಒಟ್ಟು ಶೇ.48.91 ರಷ್ಟು ಮಂದಿ ದುಡಿಮೆಗಾರರಾಗಿದ್ದಾರೆ. ಗ್ರಾಮೀಣ ಪ್ರದೇಶದ ಒಟ್ಟು ದುಡಿಮೆಗಾರರಲ್ಲಿ ಶೇ.75.05 ರಷ್ಟು ಜನರು ಪೂರ್ಣಾವಧಿ ದುಡಿಮೆಗಾರರಾಗಿದ್ದು, ಶೇ.24.95 ರಷ್ಟು ಜನರು ಅಲ್ಪಾವಧಿ ದುಡಿಮೆಗಾರರಾಗಿದ್ದಾರೆ. ನಗರ ಪ್ರದೇಶದಲ್ಲಿ ಶೇ.56.26 ಪುರುಷ ಮತ್ತು ಶೇ.19.92 ರಷ್ಟು ಮಹಿಳೆಯರನ್ನೊಳಗೊಂಡಂತೆ ಒಟ್ಟು ಶೇ.38.08 ರಷ್ಟು ದುಡಿಮೆಗಾರಿದ್ದಾರೆ. ಇವರಲ್ಲಿ ಶೇ.85.14 ಪೂರ್ಣಾವಧಿ ದುಡಿಮೆಗಾರರಾಗಿದ್ದು, ಶೇ.14.86 ಅಲ್ಪಾವಧಿ ದುಡಿಮೆಗಾರರಾಗಿದ್ದಾರೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಪುರುಷ ಮತ್ತು ಮಹಿಳೆಯರ ನಡುವಿನ ಅಂತರ ಹೆಚ್ಚಿದ್ದು, ಪುರುಷರು ದುಡಿಮೆಯಲ್ಲಿ ಪಾಲ್ಗೋಳ್ಳುವ ದರ ಮಹಿಳೆಯರಿಗಿಂತ ಅಧಿಕವಾಗಿದೆ. ಗ್ರಾಮೀಣ ಪ್ರದೇಶಕ್ಕಿಂತ ನಗರ ಪ್ರದೇಶದಲ್ಲಿ ಮಹಿಳೆಯರು ದುಡಿಮೆಯಲ್ಲಿ ಪಾಲ್ಗೋಳ್ಳುವ ದರ ಅತ್ಯಂತ ಕಡಿಮೆಯಿದೆ. ಅಂದರೆ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ನಗರ ಪ್ರದೇಶಕ್ಕಿಂತ ಹೆಚ್ಚಿನ ಜನರು ಗ್ರಾಮೀಣ ಪ್ರದೇಶದಲ್ಲಿ ದುಡಿಮೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪುರುಷರು ಮತ್ತು ಮಹಿಳೆಯರ ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದು, ಪರಿಶಿಷ್ಟರ ಜೀವನವನ್ನು ಸುಧಾರಿಸಲು ಹೆಚ್ಚಿನ ಕ್ರಮ ಅಗತ್ಯ ಎಂಬ ಅಂಶವನ್ನು ಮನಗಾಣಬೇಕಿದೆ.

**ಕೋಷ್ಟಕ: 5 ಪರಿಶಿಷ್ಟ ಜಾತಿ ಸಮುದಾಯದ ಉದ್ಯೋಗ ಸಂರಚನೆ–2011**

| ವಿವರ | ಗಂಡು | ಹೆಣ್ಣು | ಒಟ್ಟು |
|---|---|---|---|
| ವ್ಯವಸಾಯಗಾರರು | 37,811 (23.26) | 14,935 (17.99) | 52,746 (21.48) |
| ಕೃಷಿಕಾರ್ಮಿಕರು | 54,026 (33.23) | 43,372 (52.26) | 97,398 (39.67) |
| ಗೃಹಕೈಗಾರಿಕೆ | 1,817 (1.12) | 1,162 (1.40) | 2,979 (1.21) |
| ಇತರೆ | 68,914 (42.39) | 23,529 (28.35) | 92,443 (37.64) |
| ಒಟ್ಟು | 1,62,568 ನ(10.00) | 82,998 (100.00) | 2,45,566 (100.00) |

ಮೂಲ:ಭಾರತ ಜನಗಣತಿ–2011
ಗಮನಿಸಿ: ಕಂಸದಲ್ಲಿರುವುದು ಶೇಕಡವಾರು ಅಂಕಿ ಅಂಶಗಳು

ಪರಿಶಿಷ್ಟ ಜಾತಿ ದುಡಿಮೆಗಾರರ ಸಂರಚನೆಯನ್ನು ನೋಡಿದಾಗ ಒಟ್ಟು ದುಡಿಮೆಗಾರರಲ್ಲಿ ಸಾಮಾನ್ಯ ಸರಾಸರಿಗೆ ಹೋಲಿಕೆ ಮಾಡಿದರೆ ಬಹಳಷ್ಟು ವಿಭಿನ್ನತೆಯನ್ನು ಕಾಣಬಹುದಾಗಿದೆ. ಏಕೆಂದರೆ ಪರಿಶಿಷ್ಟ ಜಾತಿಯ ಅತಿಹೆಚ್ಚು ಜನರು ಕೃಷಿಕ್ಷೇತ್ರದಲ್ಲಿ ದುಡಿಮೆಗಾರರಾಗಿದ್ದಾರೆ. ಕೃಷಿಕ್ಷೇತ್ರದಲ್ಲೂ ಕೂಡ ವ್ಯವಸಾಯಗಾರರಿಗಿಂತ ಕೃಷಿ ಕಾರ್ಮಿಕರಾಗಿ ದುಡಿಯುತ್ತಿರುವವ ಪ್ರಮಾಣ ಅಧಿಕವಾಗಿರುವುದನ್ನ ಕಾಣಬಹುದಾಗಿದೆ. ಸೂಕ್ಷ್ಮವಾಗಿ ಅವಲೋಕಿಸಿದಾಗ ಒಟ್ಟು ಮಹಿಳೆ ದುಡಿಮೆಗಾರರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಅಂದರೆ ಶೇ.52.26 ರಷ್ಟು ಮಹಿಳೆಯರು ಕೃಷಿಕೂಲಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡು ಬಂದಿದೆ. ಕೃಷಿಯೇತರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅಂದರೆ ದ್ವಿತಿಯಾ ಮತ್ತು ತೃತೀಯಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವವರ ಪ್ರಮಾಣ ಜಿಲ್ಲೆಯ ಸರಾಸರಿಗಿಂತ ಕಡಿಮೆಯಿರುವುದನ್ನು ನೋಡಿದರೆ ಸರ್ಕಾರಿ, ಅರೆಸರ್ಕಾರಿ, ಖಾಸಗಿ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವವ ಪ್ರಮಾಣ ಕಡಿಮೆಯಿದೆ. ಈ ಅಂಶವು ಪರಿಶಿಷ್ಟಜಾತಿ ಜನರ ಆರ್ಥಿಕ ಹಿಂದುಳಿದಿರುವಿಕೆಯನ್ನು ತೋರಿಸುತ್ತದೆ. ಕುಟುಂಬದ ಆದಾಯ ಮತ್ತು ಮಹಿಳೆಯರ ದುಡಿಮೆಯಲ್ಲಿ ಪಾಲ್ಗೋಳ್ಳುವಿಕೆ ದರದ ನಡುವೆ ವಿಪರ್ಯ ಸಂಬಂಧವಿದೆ. ಮುಖ್ಯವಾಗಿ ಬಡತನದಿಂದಾಗಿ ಕುಟುಂಬವನ್ನು ಪೋಷಿಸಲು ಆಕೆ ಹೊರಗೆ ದುಡಿಯುತ್ತಿದ್ದಾಳೆ.

ಜಿಲ್ಲೆಯಲ್ಲಿನ ಕೃಷಿ ಕೂಲಿಯ ವಿವರವನ್ನು ನೋಡಿದರೆ 2005–06 ರಲ್ಲಿ ಗಂಡಸರಿಗೆ 59 ರೂ ಹಾಗೂ ಮಹಿಳೆಯರಿಗೆ 40 ರೂ ಕೂಲಿಯಿದ್ದದ್ದು, ಈಗ 2011–12 ರಲ್ಲಿ ಪುರುಷರಿಗೆ 163 ರೂ ಹಾಗೂ ಮಹಿಳೆಯರಿಗೆ 110 ರೂ ಕೂಲಿಯನ್ನ ನೀಡಲಾಗುತ್ತಿತ್ತು. ಪ್ರಸ್ತುತ ಪುರುಷರಿಗೆ 200 ರೂಗಳನ್ನು ಹಾಗೂ

ಮಹಿಳೆಯರಿಗೆ 150 ರೂಗಳನ್ನು ಕೊಡುತ್ತಾರೆ. ಕೂಲಿಯ ದರ ಸದಾ ಒಂದೇ ರೀತಿಯಿರುವುದಿಲ್ಲ. ಹಾಗೇಯೇ ಉದ್ಯೋಗ ಕೂಡಾ, ಸದಾ ಬದಲಾಗುತ್ತಿರುವುದನ್ನ ಕಾಣಬಹುದಾಗಿದೆ.

ಕೃಷಿಕೂಲಿ ಕಾರ್ಮಿಕರಿಗೆ ವರ್ಷದ ಎಲ್ಲಾ ಸಮಯದಲ್ಲೂ ಕೂಡ ಉದ್ಯೋಗ ದೊರೆಯುವುದಿಲ್ಲ ಬದಲಿಗೆ ಮಳೆಗಾಲದಲ್ಲಿ ಮತ್ತು ಸುಗ್ಗಿ ಕಾಲದಲ್ಲಿ ಮಾತ್ರ ಬೇಡಿಕೆಯಿರುತ್ತದೆ. ಇನ್ನುಳಿದ ತಿಂಗಳಲ್ಲಿ ಕೆಲವರು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಬಹುತೇಕ ಕೃಷಿ ಕಾರ್ಮಿಕರು ಉದ್ಯೋಗವಿಲ್ಲದೇ ಜೀವನ ನಿರ್ವಹಣೆಗೆ ತುಂಬಾ ಕಷ್ಟ ಪಡುತ್ತಾರೆ. ಅಷ್ಟು ಸಂಕಷ್ಟದಲ್ಲೂ ಕೂಡ ಬಹುತೇಕ ಮಹಿಳೆಯರು ತಮ್ಮ ಅಲ್ಪ ಆದಾಯದಲ್ಲಿ ಸ್ವ-ಸಹಾಯ ಸಂಘಗಳ ಮುಖೇನ ಅಲ್ಪಸ್ವಲ್ಪ ಉಳಿತಾಯ ಮಾಡಿ ಆರ್ಥಿಕತೆಯ ಬೆಳವಣಿಗೆಗೆ ನೆರವಾಗುತ್ತಿದ್ದಾರೆ. ಮಹಿಳಾ ಸದಸ್ಯರ ಸಕ್ರಿಯ ಪಾಲ್ಗೊಳುವಿಕೆಯು ಹಣಕಾಸಿನ ಅರಿವನ್ನು ಸೃಷ್ಟಿಸಿ ಹಣಕಾಸಿನ ಒಳಗೊಳ್ಳುವಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದನ್ನು ಪ್ರೇರೇಪಿಸುತ್ತದೆ. ಅಲ್ಲದೇ ಸಮಾಜದ ಬಡವರಿಗಾಗಿ ಕಿರು ಹಣಕಾಸು ಯೋಜನೆ ರೂಪಿಸಿ ಮಹಿಳೆಯರಿಗೆ ಕಿರು ಸಾಲ ಯೋಜನೆ ಒದಗಿಸುತ್ತಿದೆ. ಸ್ಥಿರ ಉದ್ಯೋಗ ಹೊಂದಿರದ ಬಡವರಿಗೆ ಸಣ್ಣ ಮೊತ್ತದ ಸಾಲ ನೀಡುವ ಈ ಯೋಜನೆ ಸಾಕಷ್ಟು ಉಪಯುಕ್ತವಾಗಿದೆ. ಅಲ್ಲದೆ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಲು ಮತ್ತು ಸುಧಾರಿಸಲು ಈ ಸ್ವಸಹಾಯ ಗುಂಪುಗಳು ನೆರವಾಗುತ್ತಿವೆ. ಜಿಲ್ಲೆಯಲ್ಲಿ ಒಟ್ಟು 1,08,985 ಮಹಿಳೆಯರು ಸ್ವ ಸಹಾಯದ ಸಂಘದ ಸದಸ್ಯರಿದ್ದು ಇವರಲ್ಲಿ ಶೇ.19.84 ರಷ್ಟು ಅಂದರೆ 21,264 ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ ಮಹಿಳೆಯರು ಸದಸ್ಯರಾಗಿದ್ದಾರೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಒಟ್ಟು ಜನಸಂಖ್ಯೆಯಲ್ಲಿ ಅರ್ದದಷ್ಟು ಮಹಿಳೆಯರಿದ್ದು, ಇವರಲ್ಲಿ ಶೇ.70 ಕ್ಕಿಂತ ಹೆಚ್ಚು ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರು ಶೇ 50 ರಿಂದ 60 ಕ್ಕೂ ಹೆಚ್ಚು ಮಹಿಳೆಯರು ಕೃಷಿ ಮತ್ತು ಸಂಬಂಧಿಸಿದ ಕ್ಷೇತ್ರದಲ್ಲಿ ದುಡಿಯುತ್ತಿರುವುದನ್ನು ಕಾಣಬಹುದಾಗಿದೆ. ಕೃಷಿ ಕ್ಷೇತ್ರಕ್ಕೆ ಅಗತ್ಯವಿರುವ ಒಟ್ಟು ಕಾರ್ಮಿಕ ಶಕ್ತಿಯಲ್ಲಿ ನಾಲ್ಕನೇ ಮೂರರಷ್ಟು ಮಹಿಳೆಯರು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ದೇಶದ ಅಭಿವೃದ್ದಿ ಮತ್ತು ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಮಹತ್ವದಾಗಿದೆ.

ಜಿಲ್ಲೆಯ ಅಭಿವೃದ್ಧಿ ಪ್ರಕ್ರಿಯಲ್ಲಿ ಅಸಂಖ್ಯಾತ ವಿಧದಲ್ಲಿ ಮಹಿಳೆಯರು ಕೊಡುಗೆ ನೀಡುತ್ತಿದ್ದಾರೆ. ವಿಶೇಷವಾಗಿ ಕುಟುಂದೊಳಗೆ ಮತ್ತು ಕುಟುಂಬದ ಹೊರಗೆ ದುಡಿಯುವುದರ ಮುಖೇನ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾಳೆ. ಮಹಿಳೆಯು ಕುಟುಂಬದಲ್ಲಿ ತಾಯಿಯಾಗಿ, ಮಗಳಾಗಿ, ಸಂಗಾತಿಯಾಗಿ ಕಾರ್ಯನಿರ್ವಹಿಸುವುದರ ಮುಖೇನ ಕುಟುಂಬದ ಎಲ್ಲಾ ಸದಸ್ಯರನ್ನು ಹೊಣೆ ಹೊತ್ತು ಅವರಿಗೆ ಆರೋಗ್ಯ ಮತ್ತು ಆಹಾರವನ್ನು ಒದಗಿಸುವುದರ ಮುಖೇನ ಎಲ್ಲರನ್ನೂ ರಕ್ಷಿಸುವುದನ್ನು ಕಾಣಬಹುದಾಗಿದೆ. ಈ ಎರಡೂ ದೃಷ್ಟಿಕೋನದಲ್ಲೂ ಗುಣಮಟ್ಟದ ಕಾರ್ಮಿಕ ಶಕ್ತಿಯ ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದಾಳೆ ಹಾಗೂ ದೇಶದ ಆರ್ಥಿಕತೆಗೆ ಬೆನ್ನೆಲುಬಾಗಿದ್ದಾಳೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**


- Bansil. P. C. (1977), "Agricultural problems of India", Oxford and IBH Publishing Co, New Delhi.
- Beteille, Andre, (1965), "Caste, class and changing patterns of stratification in a Tanjavar village", University of California, Berkely.
- Parvathamma. C. (1984), "Scheduled caste and Sheduled Tribes", Ashis Publishing house, New Delhi.
- Srinivas. M. N. (1976), "The Remembered village" Oxford University press, Delhi.
- Sunanda Krishnamurthi. (1988), "Wage differential in agriculture by caste, Sex and Operations", Economic and political Weekly, vol – 23, No.50.
- Dharmakumar. (1965), "Land and caste in South India", Cambridge University press, Cambridge.
- Dube. S.C. (1962), "Indian village", Rutledge and Kegan poul, London.
- Epstein. Scarlet. T. (1962), "Economic development and social change in south India", Manchester University press, Manchester.
- Gurya. G. S. (1961), "Caste class and occupation", Popular book depot, Bombay, pp. 249.
- Kaul. O. N. (1979), "Rise in Scheduled caste- Landless Labour" Economics times Oct (7-12).
- Kulamani padhi. (2007), "Agriculture labour in India – A close look" Orissa Review, Feb – March, 2007 pp 23-29.
- ಅಶೋಕ್‌ಕುಮಾರ್. ಯು. ಬಿ. (2001), "ಕೃಷಿ ಕೂಲಿಕಾರರ ಬದುಕು: ಬವಣೆ", ಚೇತನ ಬುಕ್ ಹೌಸ್, ಮೈಸೂರು.

- ಅರ್ಜುನ್ ಸೇನ್ ಗುಪ್ತಾ ವರದಿ. (2008), ಅಸಂಘಟಿತ ವಲಯದ ದುಡಿಮೆಗಾರರ ಕೂಲಿ ಮತ್ತು ಆದಾಯ. ಹೊಸತು, ಏಫಿಲ್ ಸಂಚಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
- ಚಂದ್ರಶೇಖರ್ ಡಿ,ಆರ್ (2001). ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ. ಪ್ರಸಾರಾಂಗ, ಕನ್ನಡ ವಿ ವಿ, ಹಂಪಿ.
- ಮೈಸೂರು ಜಿಲ್ಲೆಯ ಮಾನವ ಅಭಿವೃದ್ಧಿ ವರದಿ–2014
- ಮೈಸೂರು ಜಿಲ್ಲಾ ಅಂಕಿ ಅಂಶಗಳ ನೋಟ 2014–15
- ಎಂ.ಎನ್.ಶ್ರೀನಿವಾಸ (2015), 'ನೆನಪಿನ ಹಳ್ಳಿ', (ಅನು–ಟಿ.ಆರ್.ಶ್ಯಾಮಭಟ್ಟ), ಐಬಿಎಚ್ ಪ್ರಕಾಶನ, ಬೆಂಗಳೂರು.
- ಭಾರತ ಜನಗಣತಿ–2011, ಭಾರತ ಸರ್ಕಾರ ನವದೆಹಲಿ.


IIMRD JOURNALS